ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.715/2021 CW-2 PW- 2

| | | |
|---|---|---|
| ಹೆಸರು | : | ಬಸವರಾಜಪ್ಪ |
| ತಂದೆಯ/ಗಂಡನ ಹೆಸರು | : | ಬಸವಲಿಂಗಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಬ್ಯಾಂಕ್ ನೌಕರ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 26-05-2022

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಚಾಸಾ-1 ನನ್ನ ಮಗಳು. ಚಾಸಾ-3 ನನ್ನ ಹೆಂಡತಿ. ಚಾಸಾ-4 ನನ್ನ ಬಾವ. ಚಾಸಾ-5 ನನ್ನ ಮಗ. ಚಾಸಾ-6 ನನ್ನ ಇನ್ನೊಬ್ಬ ಮಗಳು. ಚಾಸಾ-7 ರಿಂದ 11 ರವರ ಪರಿಚಯ ಇದೆ. ಚಾಸಾ-12 ರವರ ಪರಿಚಯ ಇರುವುದಿಲ್ಲ. 1 ನೇ ಆರೋಪಿ ನನ್ನ ಅಳಿಯ. ಉಳಿದ ಆರೋಪಿತರು ನನ್ನ ಬೀಗರು.

ದಿಃ 15-02-2019 ರಂದು ಚಾಸಾ-1 ರವರನ್ನು 1 ನೇ ಆರೋಪಿಗೆ ಕೊಟ್ಟು ಮಾನವಿಯ ಕಲ್ಮಠ ಜ್ಞಾನ ಮಂದಿರ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ 1 ರಿಂದ 3 ನೇ ಆರೋಪಿತರು 13 ತೊಲೆ ಬಂಗಾರ, 5 ಲಕ್ಷ ನಗದು ಹಣ, 2 ಕಿಲೋ ಬೆಳ್ಳಿ, ವರದಕ್ಷಿಣೆ ಕೇಳಿದ್ದರು. ಆಗ ನಾನು ಮತ್ತು ಚಾಸಾ-4 ರವರು ಸೇರಿ ಅಷ್ಟೊಂದು ನನಗೆ ಕೊಡಲಾಗುವುದಿಲ್ಲ, ನಾನು ವರದಕ್ಷಿಣೆ ವಿರೋಧಿ ಆದರೂ ಸಹ ಚಾಸಾ-1 ರವರ ಜೀವನದ ಬಗ್ಗೆ ವಿಚಾರಿಸಿ, 10 ತೊಲೆ ಬಂಗಾರ, 2 ಲಕ್ಷ ನಗದು ಹಣ ಮತ್ತು 1 ಕೆಜಿ ಬೆಳ್ಳಿಯನ್ನು ಹಾಗೂ ಮನೆ ಸಾಮಾನುಗಳನ್ನು ಮದುವೆ ಸಂದರ್ಭದಲ್ಲಿ 1 ನೇ ಆರೋಪಿಗೆ ನೀಡಿದೆವು.

ನಂತರ ಮದುವೆಯಾದ 9 ದಿವಸಗಳವರೆಗೆ 1 ನೇ ಆರೋಪಿಯು ನಮ್ಮ ಮನೆಗೆ ಬಂದಿದ್ದ, ಆ ನಂತರ ವೈವಾಹಿಕ ಜೀವನ ನಡೆಸಲು ಚಾಸಾ-1 ರವರನ್ನು ಕಳುಹಿಸಿಕೊಟ್ಟೆವು.

ಆರೋಪಿತರ ಮನೆಯಲ್ಲಿ ಆರೋಪಿತರು ಚಾಸಾ-1 ರವರನ್ನು 1 ತಿಂಗಳು ಚೆನ್ನಾಗಿ ನೋಡಿಕೊಂಡರು. ನಂತರ 3 ನೇ ಆರೋಪಿಯು ಚಾಸಾ-1 ರವರಿಗೆ ನೀನು ದರಿದ್ರದವಳು, ನೀನು

ಮಾಡಿದ ಅಡುಗೆ ನಾವು ತಿನ್ನಬಾರದು, ಬೆಳಿಗ್ಗೆ ನಿನ್ನ ಮುಖ ನಾವು ನೋಡಬಾರದು, ನಿನಗೆ ಮಕ್ಕಳು ಆಗುವುದಿಲ್ಲ, ನಾವು ನಿನ್ನನ್ನು ಸುಮ್ಮನೆ ಮದುವೆ ಮಾಡಿಕೊಂಡು ಬಂದೆವು ಎಂದು ಕಿರುಕುಳ ನೀಡಲು ಪ್ರಾರಂಭಿಸಿದರು. ಅದೇರೀತಿ 2 ನೇ ಆರೋಪಿಯು ಕೂಡಾ ಚಾಸಾ-1 ರವರಿಗೆ ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವುದಿಲ್ಲ, ದರಿದ್ರದವಳು ಎಂದು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ನೀಡುತ್ತಿದ್ದನು. ಅದೇರೀತಿ ಚಾಸಾ-1 ರವರಿಗೆ ಟಿವಿ ನೋಡಲು ಬಿಡುತ್ತಿರಲಿಲ್ಲ. 1 ನೇ ಆರೋಪಿಯು ತನ್ನ ತಂದೆ ತಾಯಿ ಮಾತು ಕೇಳಿ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದ. 1 ನೇ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಚೂಟುವುದು, ಹೊಡೆಯುವುದು ಬಡಿಯುವುದು ಮತ್ತು ಬಾಯಿಯಿಂದ ಕಡಿಯುವುದು ಮಾಡುತ್ತಿದ್ದ. ಚಾಸಾ-1 ರವರನ್ನು ದೇವಸ್ಥಾನಕ್ಕೆ ಕಳಿಸುತ್ತಿರಲಿಲ್ಲ. 1 ನೇ ಆರೋಪಿಯು ಚಾಸಾ-1 ರವರಿಗೆ ಅವರ ತಂದೆ-ತಾಯಿ ಹೇಳಿದಂತೆ ಕೇಳಿಕೊಂಡು ಬಾಯಿ ಮುಚ್ಚಿಕೊಂಡು ಇರು ಎಂದು ಹೇಳುತ್ತಿದ್ದ.

2 ನೇ ಆರೋಪಿಯು 2019 ನೇಲ ಸಾಲಿನಲ್ಲಿ ಚಾಸಾ-4 ರವರಿಗೆ ಪೋನ ಮಾಡಿ, ಚಾಸಾ-1 ರವರನ್ನು ಕರೆದುಕೊಂಡು ಹೋಗಿ ಮದುವೆ ಕಾಲಕ್ಕೆ ನೀಡಿದ ವರದಕ್ಷಿಣೆಯನ್ನು ಮರಳಿ ತೆಗೆದುಕೊಂಡು ಹೋಗಿ ಎಂದು ಹೇಳಿದರು. ನಂತರ ಚಾಸಾ-4 ರವರು ಆ ವಿಷಯವನ್ನು ನಮಗೆ ಹೇಳಿದರು. ಈ ರೀತಿ ಆರೋಪಿತರ ವರ್ತನೆಯಿಂದ ಚಾಸಾ-1 ರವರು ಅನಾರೋಗ್ಯಕ್ಕೆ ತುತ್ತಾದರು. ನಂತರ 1 ನೇ ಆರೋಪಿಯ ತಮ್ಮ ನನ್ನ ಮಗಳು ಚಾಸಾ-1 ರವರನ್ನು ಕರೆದುಕೊಂಡು ಬಂದು ನಮ್ಮ ಮನೆಗೆ ಬಿಟ್ಟು ಹೋದ. ನಂತರ ನಾವು ಚಾಸಾ-1 ರವರನ್ನು ಬಳ್ಳಾರಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು.

ದಿಃ 18-12-2019 ರಂದು ರಾತ್ರಿ 8-00 ಗಂಟೆ ಸುಮಾರಿಗೆ ನಾನು, ಚಾಸಾ-3, 4 ಮತ್ತು 6 ರವರು ಸೇರಿ ನಮ್ಮ ಮನೆಯಲ್ಲಿ ಮಾತನಾಡುತ್ತಾ ಕುಳಿತಿದ್ದೆವು, ಆಗ ಚಾಸಾ-1 ರವರು ಸಹ ಅಡುಗೆ ಮನೆಯಲ್ಲಿ ಇದ್ದರು. ಆಗ 1 ರಿಂದ 3 ನೇ ಆರೋಪಿತರು ನಮ್ಮ ಮನೆಯ ಒಳಗೆ ಬಂದರು, 1 ನೇ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಹೊಡೆಬಡೆ ಮಾಡಿದರು, 3 ನೇ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಕಪಾಳಿಗೆ ಹೊಡೆದರು ಮತ್ತು 2 ನೇ ಆರೋಪಿಯು ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿದನು. ಆಗ ಚಾಸಾ-5, 7 ರಿಂದ 11 ರವರು ಬಂದು ಗಲಾಟೆ ಬಿಡಿಸಿಕೊಂಡರು. ಆಗ 1 ನೇ ಆರೋಪಿಯು ಚಾಸಾ-1 ರವರಿಗೆ ನಿನ್ನನ್ನು ಕೊಲೆ ಮಾಡುತ್ತೇನೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದನು. ನಂತರ ನಾವು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಬೇಕೆಂದು ಸಿಂಧನೂರು ನಗರ ಪೋ.ಠಾಣೆಗೆ ಹೋದೆವು. ಅಲ್ಲಿ ನಾವು ಪೋಲೀಸರಿಗೆ

ದೂರು ನೀಡಿದೆವು, ನಂತರ ಆರೋಪಿತರನ್ನು ಪೋ.ಠಾಣೆಗೆ ಕರೆಯಿಸಿ ಅವರಿಂದ ಈ ತರಹ ಮಾಡುವುದಿಲ್ಲ ತಪ್ಪಾಗಿದೆ ಎಂದು ಬರೆಸಿಕೊಂಡರು.

ನಂತರ ದಿಃ 01-01-2020 ರಂದು 1 ರಿಂದ 3 ನೇ ಆರೋಪಿತರು ನಮ್ಮ ಮನೆಗೆ ಬಂದಿದ್ದರು. ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ, ತೊಂದರೆ ನೀಡುವುದಿಲ್ಲ ಎಂದು ಹೇಳಿದ್ದರಿಂದ ಚಾಸಾ-4 ರವರ ಮೂಲಕ ಚಾಸಾ-1 ರವರನ್ನು ಆರೋಪಿತರ ಮನೆಗೆ ಕಳುಹಿಸಿಕೊಟ್ಟೆವು. ಪುನಃ ಆರೋಪಿತರು ಚಾಸಾ-1 ರವರಿಗೆ ಕಿರುಕುಳ ನೀಡಲು ಪ್ರಾರಂಭಿಸಿದರು.

ನಂತರ ದಿಃ 22-05-2020 ರಂದು ಚಾಸಾ-1 ರವರು ರಾತ್ರಿ 10-00 ಗಂಟೆಗೆ ನಮ್ಮ ಮನೆಗೆ ಬಂದರು. (ಈ ಸಂದರ್ಭದಲ್ಲಿ ಸಾಕ್ಷಿಯು ಅಳುವ ರೀತಿಯಲ್ಲಿ ವರ್ತಿಸಿ, ನೀರು ಕುಡಿಯಲು ಕೇಳಿದ್ದರಿಂದ ಕುಡಿಯಲು ನೀರನ್ನು ಕೊಡಲಾಯಿತು). ಚಾಸಾ-1 ರವರು ಆರೋಪಿತರು ಹೆಚ್ಚಿನ ವರದಕ್ಷಿಣೆ 5 ಲಕ್ಷ ತರಬೇಕು ಎಂದು ಹೇಳಿ ಹೊಡೆ ಬಡಿ ಮಾಡಿ ಕಳುಹಿಸಿದ್ದಾರೆ ಎಂದು ತಿಳಿಸಿದರು. ಆ ನಂತರ ಈ ಪ್ರಕರಣ ದಾಖಲಿಸಿದ್ದೇವೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ</u>

1 ನೇ ಆರೋಪಿಯು ಚಾಸಾ-1 ರವರಿಗೆ 5 ಲಕ್ಷ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು , ಬದ್ಮಾಸ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ ಎಂದರೆ ಸರಿ. ಆರೋಪಿತರು ದಿಃ 18-12-2019 ರಂದು ರಾತ್ರಿ 8-30 ಗಂಟೆಗೆ ಬಂದಿದ್ದರು ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರ ಕೂದಲು ಹಿಡಿದು ಎಳೆದಾಡಿ, ಕಪ್ಪಾಳಕ್ಕೆ ಹೊಡೆದು, ಹೆಚ್ಚಿನ ವರದಕ್ಷಿಣೆ 5 ಲಕ್ಷ ತೆಗೆದುಕೊಂಡು ಬಾ ಎಂದು ಹೇಳಿದರೂ ಸಹ ತಂದಿಲ್ಲ ಎಂದು ಬೈದು, ಹೊಟ್ಟೆಗೆ ಮತ್ತು ಬೆನ್ನಿಗೆ ಗುದ್ದಿದ್ದ ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರನ್ನು ಮನೆಯಿಂದ ಹೊರಗೆ ಎಳೆದುಕೊಂಡು ಹೋದ ಎಂದರೆ ಸರಿ. ನಾವು ನೀಡಿದ ವರದಕ್ಷಿಣೆ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಆರೋಪಿತರು ಹೇಳಿದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.